ಮಂಡ್ಯಾ ನಗರಕ್ಕೆ ಖಾಸಗೀ ಬಸ್ಸುಗಳನ್ನು ಓಡಿಸಲು ಖಾಸಗೀಯವರಿಗೆ ಪರವಾನಗಿಯನ್ನು ನೀಡುವ ವಿಚಾರವನ್ನು ಪರಿಗಣಿಸುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮಂಡ್ಯಾಕ್ಕೆ ಸರ್ಕಾರವು ಸೂಚನೆ ನೀಡುತ್ತದೆ.

(5) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಪುರಸಭೆಯ ಆಸ್ತಿಯಲ್ಲಿ ಅನಧಿಕೃತವಾಗಿ ಕಟ್ಟಡ ಕಟ್ಟುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ಚಿಕ್ಕನಾಯ್ಕನಹಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿ ಸುಮಾರು 9 ಗುಂಟೆ ಜಮೀನಿದ್ದು ಸದರಿ ಜಮೀನಿನ ಪೈಕಿ ಸುಮಾರು 0.5 ಗುಂಟೆ ಜಮೀನನ್ನು ಸ್ವಾತಂತ್ರ್ಯ ಹೋರಾಟಗಾರರಿಗೂ 0.2 ಗುಂಟೆ ಜಮೀನನ್ನು ನರಸಿಂಹಯ್ಯ ಎಂಬುವರಿಗೂ 0.01 ಗುಂಟೆ ಜಮೀನನ್ನು ರಸ್ತೆಗೂ ಜಿಲ್ಲಾಧಿಕಾರಿಗಳು, ತುಮಕೂರು ಕೆ.ಎ.ಟಿ. ತೀರ್ಮಾನದ ಮೇರೆಗೆ ಮಂಜೂರು ಮಾಡಿದ್ದು ಸದರಿಯವರು ಹಣ ಕೂಡ ಕಟ್ಟಿರುತ್ತಾರೆ. ಆದಾಗ್ಯೂ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಸದರಿ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುವ ದಿಸೆಯಿಂದ ಈಗಾಗಲೇ ಪಾಯ ತೋಡಿದ್ದು, ಕಲ್ಲು ಮಣ್ಣು ಜಮಾವಣೆ ಕೂಡ ಮಾಡಿರುತ್ತಾರೆ. ಇದು ಕಾನೂನಿಗೆ ವಿರೋಧ ಅಲ್ಲವೆ? ಹಾಗೂ ಕಾಂಗ್ರೆಸ್ ಸಂಸ್ಥೆಯವರಿಗೆ ಜಮೀನು ಮಂಜೂರು ಆಗದಿದ್ದಾಗ್ಯೂ ಅನಧಿಕೃತವಾಗಿ ಈ ಕೆಲಸ ಮಾಡಿ ಗೂಂಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿಲ್ಲವೆ? ಕಾಂಗ್ರೆಸ್‌ಗೆ ಸಾರ್ವಜನಿಕ ಸ್ಥಳವನ್ನು ಕೊಡುವುದಾದರೆ ಬೇರೆ ಪಕ್ಷಗಳಿಗೂ ಇಂಥಾದ್ದೇ ಅವಕಾಶ ಕಲ್ಪಿಸಿಕೊಡಲಾಗುವುದೆ? ಹಾಗೂ ಇದು ಸರ್ಕಾರದ ತೀರ್ಮಾನವಲ್ಲದಿದ್ದಲ್ಲಿ ತಕ್ಷಣ ಈ ಕೆಲಸವನ್ನು ನಿಲ್ಲಿಸಿ ಸಂಬಂಧಪಟ್ಟವರ ಮೇಲೆ ಕಾನೂನಿನ ರೀತಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಸಭಾಧ್ಯಕ್ಷರೆ ಇದಕ್ಕೆ ಉತ್ತರ ಸಿದ್ಧವಾಗಿಲ್ಲ. ಮಾನ್ಯ ಸದಸ್ಯರಿಗೆ ಅನಂತರ ಉತ್ತರವನ್ನು ತರಿಸಿ ಒದಗಿಸುತ್ತೇನೆ.

ಹಕ್ಕುಚ್ಯುತಿ ನಿರ್ಣಯಕ್ಕೆ ಅನುಮತಿ ಕೋರಿಕೆ

ಹಿಂದಿನ ಆರೋಗ್ಯ ಮಂತ್ರಿಗಳು ಅಂದಾಜು ಸಮಿತಿಯ ವಿರುದ್ಧ ಮಾತನಾಡಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಒಂದು ವಿಷಯವನ್ನು ತಮಗೆ ನಾನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಇವತ್ತು ಹೇಳಿಕೆಯನ್ನು ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು:- ಇವತ್ತು ಇನ್ನೂ ಮುಗಿದಿಲ್ಲ, ಇವತ್ತು ಈಗ ತಾನೆ ಪ್ರಾರಂಭವಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಪ್ರತ್ಯೇಕವಾಗಿ ಒಂದು ವಿಷಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಸಮಿತಿಯ ಬಗ್ಗೆ ಹಿಂದಿನ ಮಾನ್ಯ ಆರೋಗ್ಯ ಮಂತ್ರಿಗಳು ಅವರ ಮನಸ್ಸಿಗೆ ಬಂದಂತೆ ಮಾತನಾಡಿಕೊಂಡು ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿದ್ದರು. ತಾವು ಅಪ್ಪಣೆ ಕೊಟ್ಟರೆ, ಅದನ್ನು ಓದು ಎಂದರೆ ಓದುತ್ತೇನೆ. ಬಹುಶಃ ತಮ್ಮ ಹತ್ತಿರ ಕೂಡ ಆ ಪತ್ರಿಕಾ ಹೇಳಿಕೆ ಇದೆ. ಸಮಿತಿಯ ಬಗ್ಗೆ ಈ ರೀತಿ ಹಗುರವಾಗಿ ಮಾತನಾಡತಕ್ಕ ಹಕ್ಕನ್ನು ಅವರಿಗೆ ಯಾರೂ ಕೊಟ್ಟಿಲ್ಲವೆಂದು ಕಾಣಿಸುತ್ತದೆ. ಹಕ್ಕನ್ನು ಕೊಟ್ಟಿದೆ, ಆದ್ದರಿಂದ ಪರವಾಗಿಲ್ಲ ಎಂದು ಹೇಳುವುದಾದರೆ ಆಗಬಹುದು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಕಾನೂನು ಪ್ರಕಾರ ಸಮಿತಿಯ ಬಗ್ಗೆ, ಸಮಿತಿಯ ಅಧ್ಯಕ್ಷರ ಬಗ್ಗೆ ಸದನದಿಂದ ಹೊರಗಡೆ ಸ್ಟೇಟ್‌ಮೆಂಟನ್ನು ಕೊಡುವುದಕ್ಕೆ ರೂಲ್ಸ್ ಪ್ರಕಾರ ಅವಕಾಶವಿಲ್ಲ. ಆದರೂ ಅವರು ಪತ್ರಿಕೆಗೆ ಹೇಳಿಕೆಯನ್ನು

ಕೊಟ್ಟಿದ್ದಾರೆ. ನಾನು ಆ ಪತ್ರಿಕಾ ಹೇಳಿಕೆಯನ್ನು ತಮಗೆ ಕಳುಹಿಸಿಕೊಟ್ಟು ಇದು ಹಕ್ಕುಚ್ಯುತಿಯಾಗಿದೆ ಆದುದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ನಾನು ಕೇಳಿಕೊಂಡಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಆ ರೀತಿ ಅಧಿಕಾರ ಇದ್ದರೆ ತಾವು ಆದನ್ನು ಹೇಳಿ. ಎರಡನ್ನೂ ಚರ್ಚೆಗೆ ಇಡಬಹುದು. ಸಮಿತಿಯ ಛೇರ್ಮನ್‌ಗೆ ಅಧಿಕಾರವಿದೆ, ಸದಸ್ಯರಿಗೆ ಇಲ್ಲವೆಂದು....

ಅಧ್ಯಕ್ಷರು:- ನಿಮ್ಮ ಹಕ್ಕುಚ್ಯುತಿ ಸೂಚನೆ ನಮ್ಮ ಕಛೇರಿಗೆ 6-1-93ರಂದು ಬಂದಿದೆ. ಅವತ್ತು ತಾವು ಕೊಟ್ಟ ರತಕ್ಕ ಪ್ರಿವಿಲೇಜ್ ನೋಟೀಸಿನ ಬಗ್ಗೆ ಇವತ್ತು ನಾನು ತೀರ್ಮಾನವನ್ನು ಕೊಡುವವನಿದ್ದೇನೆ. ಮಾನ್ಯ ಅಜೀಜ್ ಸೇಠ್‌ರವರ ಸೂಚನೆಯ ಬಗ್ಗೆ ಕೂಡ ಇವತ್ತು ನಾನು ತೀರ್ಮಾನವನ್ನು ಕೊಡುವವನಿದ್ದೇನೆ. ಅದೇ ರೀತಿ ಮಾನ್ಯ ಸದಸ್ಯರಾದ ಕೌಜಲಗಿಯವರು ಕೊಟ್ಟ ರತಕ್ಕ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಕೂಡ ಇವತ್ತು ನಾನು ನನ್ನ ತೀರ್ಮಾನವನ್ನು ಕೊಡುವವನಿದ್ದೇನೆ. ಈಗ ವಿಧೇಯಕಗಳನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ

(ಪರ್ಯಾಲೋಚನಾ ಪ್ರಸ್ತಾವ)

† ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೆ, 1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಇದು ಜಂಟಿ ಪರಿಶೀಲನಾ ಸಮಿತಿಗೆ ಹೋಗಿ ಬಂದಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶವೇನೂ ಇಲ್ಲ. ಆದರೆ ಒಂದೇ ಒಂದು ವಿಚಾರ ಎಂದರೆ ಈ ವರದಿಯನ್ನು ಸಲ್ಲಿಸುವಾಗ ಈ ಸಮಿತಿಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ್ ಎನ್ನತಕ್ಕವರು ತಮ್ಮ ಡಿಸೆಂಟ್ ನೋಟನ್ನು ಕೊಟ್ಟಿದ್ದಾರೆ. ಇದರಲ್ಲಿ he has raised a valid question about competency of the Legislature particularly ಅನುಬಂಧ 5ರಲ್ಲಿ I am quoting the Report.. ಭಾರತ ಸರ್ಕಾರ ರಚಿಸಿರುವ ಕಾನೂನನ್ನು ರಾಜ್ಯಸರ್ಕಾರ ಕೆಲವೊಂದು ವಿಷಯಗಳಲ್ಲಿ ಮೂಲಭೂತ ತತ್ವ ಮಾರ್ಪಾಡು ಆಗದ ರೀತಿ ತಿದ್ದುಪಡಿ ಮಾಡಬಹುದು ಆದರೆ ನಮ್ಮ ಈ ವಿಧೇಯಕದಲ್ಲಿ ಮೂಲ ತತ್ವವನ್ನೇ ಬದಲಾಯಿಸಲು ಸೂಚಿಸಿರುವುದರಿಂದ ನನ್ನ ಅಭಿಪ್ರಾಯದಲ್ಲಿ ರಾಜ್ಯ ಸರ್ಕಾರಕ್ಕೆ ಇಂಥ ವಿಧೇಯಕ ತರಲು ಅಧಿಕಾರವಿಲ್ಲ.

11-30 A.M

It is a fundamental question ನಾವು ಈ ಮಸೂದೆಯನ್ನು ಬೇಸಿಕ್ ಆಗಿ ಸ್ವಾಗತಿಸಿದರೂ, ಈ ಅಧಿಕಾರ ಇಲ್ಲ ಎನ್ನತಕ್ಕಂಥಾದ್ದನ್ನು ಜವಾಬ್ದಾರಿಯುತ ಜಂಟಿ ಸಲಹಾ ಸಮಿತಿಯ ಅಧ್ಯಕ್ಷರೇ ಹೇಳಿರುವುದರಿಂದ ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಆಲೋಚನೆ ಮಾಡುತ್ತೀರೋ because if there is no competency how can we legislate on such a bill and other things I don't question I welcome. Before the bill being introduced, this aspect has to be taken note of. I seek clarification from the Hon'ble Minister...